"ELECTION URGENT"

सत्यमेव जयते

# ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ಕಟ್ಟಡದ (ಹಿಂಭಾಗ), 1ನೇ ಮಹಡಿ,
ನಂ. 8, ಕನ್ನಿಂಗ್ ಹ್ಯಾಂ ರಸ್ತೆ. ಬೆಂಗಳೂರು-560052.

## ರಾಜ್ಯ ಚುನಾವಣಾ ಆಯೋಗದ ನಡವಳಿ

ವಿಷಯ : ಗ್ರಾಮ ಪಂಚಾಯತಿ ಸಾರ್ವತ್ರಿಕ ಚುನಾವಣೆ-2020 – ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು 20.ಹೆಬ್ಬಾಳು ಗ್ರಾಮ ಪಂಚಾಯಿತಿಯ 1 ಮತ್ತು 2ನೇ ಕ್ಷೇತ್ರಕ್ಕೆ ಮರು ಮತದಾನ ನಡೆಸುವ ಬಗ್ಗೆ.

ಓದಲಾಗಿದೆ : 1. ಆಯೋಗದ ಆದೇಶ ಸಂಖ್ಯೆ ರಾಚುಆ.134.ಇಜಿಪಿ.2020 ದಿನಾಂಕ: 30.11.2020

2. ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ ರವರ ಪತ್ರದ ಸಂಖ್ಯೆ: ರಾಚು/ಸಿಆರ್/09/2020-21 ದಿ.22.12.2020 23.12.2020 ಮತ್ತು 24.12.2020

------

**ಪ್ರಸ್ತಾವನೆ:**

ಮೇಲ್ಕಂಡ ಕ್ರಮ ಸಂಖ್ಯೆ(1)ರಲ್ಲಿ ಓದಲಾದ ಆಯೋಗದ ಆದೇಶದಲ್ಲಿ ರಾಜ್ಯದಲ್ಲಿ ಅವಧಿ ಮುಕ್ತಾಯವಾಗಿರುವ ಗ್ರಾಮ ಪಂಚಾಯಿತಿಗಳಿಗೆ ಸಾರ್ವತ್ರಿಕ ಚುನಾವಣೆ ನಡೆಸಲು ಆದೇಶಿಸಲಾಗಿದೆ.

ಮೇಲ್ಕಂಡ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಜಿಲ್ಲಾಧಿಕಾರಿಗಳ ಪತ್ರದಲ್ಲಿ 20-ಹೆಬ್ಬಾಳು ಗ್ರಾಮ ಪಂಚಾಯಿತಿಗೆ ದಿನಾಂಕ: 22.12.2020 ರಂದು ಮತದಾನ ಪ್ರಾರಂಭದಲ್ಲಿ 1.ಹೆಬ್ಬಾಳು-1 ಮತ್ತು 2.ಹೆಬ್ಬಾಳು-2ನೇ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ವ್ಯತ್ಯಾಸವಿರುವುದಾಗಿ ಮತದಾನ ಮಾಡದೆ ಮತದಾನ ಸ್ಥಗಿತಗೊಂಡಿರುವುದಾಗಿಯೂ, ಮತದಾರರ ಪಟ್ಟಿಯ ನ್ಯೂನತೆಯನ್ನು ಸರಿಪಡಿಸಿಕೊಂಡು ನಂತರ ಮರು ಮತದಾನಕ್ಕೆ ಅನುಮತಿನೀಡುವಂತೆ ಕೋರಿರುತ್ತಾರೆ.

| ಜಿಲ್ಲೆ | ತಾಲ್ಲೂಕು | ಮತದಾನ ಸ್ಥಗಿತಗೊಂಡಿರುವ ಗ್ರಾಮಪಂಚಾಯಿತಿ, ಕ್ಷೇತ್ರ ಮತ್ತು ಮತಗಟ್ಟೆ ಸಂಖ್ಯೆ | ಘಟನೆಯ ವಿವರ |
|---|---|---|---|
| ದಾವಣಗೆರೆ | ದಾವಣಗೆರೆ | 20.ಹೆಬ್ಬಾಳು ಗ್ರಾಮ ಪಂಚಾಯಿತಿ 1.ಹೆಬ್ಬಾಳು 1ನೇ ಕ್ಷೇತ್ರ ಮತ್ತು 2.ಹೆಬ್ಬಾಳು 2ನೇ ಕ್ಷೇತ್ರ ಮತಗಟ್ಟೆ ಸಂಖ್ಯೆ: 108 ಮತ್ತು 109 | ಮತದಾರರ ಪಟ್ಟಿಯಲ್ಲಿ ನ್ಯೂನತೆಗಳಿರುವುದಾಗಿ ಮತದಾನ ಸ್ಥಗಿತವಾಗಿರುತ್ತದೆ. |

ಪುಟ 2ಕ್ಕೆ..

ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ ಇವರ ದಿನಾಂಕ: 23.12.2020ರ ಪತ್ರದಲ್ಲಿ ವಿಧಾನಸಭಾ ಮತದಾರರ ಪಟ್ಟಿಯ ಭಾಗದ ಸಂಖ್ಯೆ 71 ಮತ್ತು 72ನ್ನು ಅಳವಡಿಸಿಕೊಂಡು ಹೆಬ್ಬಾಳು ಗ್ರಾಮ ಪಂಚಾಯಿತಿಯ 1.ಹೆಬ್ಬಾಳು–1ನೇ ಕ್ಷೇತ್ರದ ಮತದಾರರ ಪಟ್ಟಿಯನ್ನು ಹಾಗೂ ವಿಧಾನಸಭಾ ಮತದಾರರ ಪಟ್ಟಿಯ ಭಾಗದ ಸಂಖ್ಯೆ: 72ನ್ನು ಅಳವಡಿಸಿಕೊಂಡು 2.ಹೆಬ್ಬಾಳು–2ನೇ ಕ್ಷೇತ್ರದ ಮತದಾರರ ಪಟ್ಟಿಯನ್ನು ತಯಾರಿಸಲಾಗಿದ್ದುದರಿಂದ ವ್ಯತ್ಯಾಸವಾಗಿರುವುದಾಗಿಯೂ, ಈ ಬಗ್ಗೆ ಉಪವಿಭಾಗಾಧಿಕಾರಿಗಳು, ತಾಲ್ಲೂಕು ತಹಶೀಲ್ದಾರರು ಮತ್ತು ಗ್ರಾಮ ಪಂಚಾಯಿತಿ ಚುನಾವಣಾಧಿಕಾರಿಗಳು ಸ್ಥಳ ತನಿಖೆ ಮಾಡಿ ಸದರಿ ತಪ್ಪುಗಳನ್ನು ಸರಿಪಡಿಸಿ, ವಿಧಾನಸಭಾ ಮತದಾರರ ಪಟ್ಟಿಯ ಭಾಗದ ಸಂಖ್ಯೆ 72ನ್ನು ಅಳವಡಿಸಿಕೊಂಡು ಹೆಬ್ಬಾಳು ಗ್ರಾಮ ಪಂಚಾಯಿತಿಯ 1.ಹೆಬ್ಬಾಳು–1ನೇ ಕ್ಷೇತ್ರದ ಮತದಾರರ ಪಟ್ಟಿಯನ್ನು ಹಾಗೂ ವಿಧಾನಸಭಾ ಮತದಾರರ ಪಟ್ಟಿಯ ಭಾಗದ ಸಂಖ್ಯೆ: 71ನ್ನು ಅಳವಡಿಸಿಕೊಂಡು 2.ಹೆಬ್ಬಾಳು–2ನೇ ಕ್ಷೇತ್ರದ ಮತದಾರರ ಪಟ್ಟಿಯನ್ನು ತಯಾರಿಸಿರುವುದಾಗಿಯೂ, ಇದರಿಂದ ಸ್ಪರ್ಧಿಸಿರುವ ಅಭ್ಯರ್ಥಿಗಳ ನಾಮಪತ್ರದಲ್ಲಿ ಮತ್ತು ಕ್ಷೇತ್ರದಲ್ಲಿ ಯಾವುದೇ ವ್ಯತ್ಯಾಸವಾಗುವುದಿಲ್ಲವೆಂದು ಆದುದರಿಂದ ಸದರಿ ಪ್ರಕ್ರಿಯೆಯನ್ನು ಹಾಗೆಯೇ ಉಳಿಸಿಕೊಂಡು ಮರು ಮತದಾನಕ್ಕೆ ಅನುಮತಿ ನೀಡುವಂತೆ ಕೋರಿರುತ್ತಾರೆ. ಈ ಕ್ಷೇತ್ರಗಳಿಗೆ ತಯಾರಿಸಲಾಗಿರುವ ಎಲ್ಲಾ ಮತಪತ್ರಗಳನ್ನು ಜಿಲ್ಲಾ ಖಜಾನೆಯಲ್ಲಿ ತಹಶೀಲ್ದಾರ್, ದಾವಣಗೆರೆ ತಾಲ್ಲೂಕು ಇವರ ಅಭಿರಕ್ಷೆಯಲ್ಲಿ ಇಟ್ಟಿರುವುದಾಗಿ ತಿಳಿಸಿರುತ್ತಾರೆ.

ಹೆಬ್ಬಾಳು ಗ್ರಾಮ ಪಂಚಾಯಿತಿಯ ಹೆಬ್ಬಾಳು 1 ಮತ್ತು 2ನೇ ಕ್ಷೇತ್ರಗಳ ಮತದಾರರ ಪಟ್ಟಿಯನ್ನು ಸರಿಪಡಿಸಿದ್ದು, ಇದರಿಂದ ಸ್ಪರ್ಧಿಸಿರುವ ಅಭ್ಯರ್ಥಿಗಳ ನಾಮಪತ್ರದಲ್ಲಿ ಮತ್ತು ಕ್ಷೇತ್ರದಲ್ಲಿ ಯಾವುದೇ ವ್ಯತ್ಯಾಸವಾಗುವುದಿಲ್ಲವೆಂದು ತಿಳಿಸಿರುವುದರಿಂದ, ಸದರಿ ಕ್ಷೇತ್ರಗಳ ಮರು ಮತದಾನಕ್ಕೆ ಈ ಕೆಳಕಂಡಂತೆ ಆದೇಶಿಸಿದೆ.

## ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ: ರಾಚುಆ:206:ಇಜಿಪಿ:2020
## ಬೆಂಗಳೂರು, ದಿನಾಂಕ: 24.12.2020

ರಾಜ್ಯ ಚುನಾವಣಾ ಆಯೋಗವು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ಪ್ರಕರಣ 308 ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಚುನಾವಣೆಯನ್ನು ನಡೆಸುವ) ನಿಯಮಗಳು, 1993ರ ನಿಯಮ 30 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ದಾವಣಗೆರೆ ತಾಲ್ಲೂಕು, 20–ಹೆಬ್ಬಾಳ ಗ್ರಾಮ ಪಂಚಾಯಿತಿಯ ಹೆಬ್ಬಾಳು–1 ಮತ್ತು 2ನೇ ಕ್ಷೇತ್ರಕ್ಕೆ ಸರಿಪಡಿಸಿದ ಮತದಾರರ ಪಟ್ಟಿಯೊಂದಿಗೆ **ದಿನಾಂಕ: 29.12.2020** ರಂದು ಮರುಮತದಾನವನ್ನು ನಡೆಸುವಂತೆ ಆದೇಶಿಸಿದೆ.

ಈ ಕ್ಷೇತ್ರದ ಮತಗಟ್ಟೆಗಳಲ್ಲಿ ಮತದಾನ ದಿನದಂದು ಬೆಳಿಗ್ಗೆ 7–00 ರಿಂದ ಸಾಯಂಕಾಲ 5–00 ಗಂಟೆಯವರೆಗೆ ಮತದಾನ ನಡೆಸತಕ್ಕದ್ದು. ಜಿಲ್ಲಾಧಿಕಾರಿಗಳು ಹಾಗೂ ಚುನಾವಣಾಧಿಕಾರಿಗಳು ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಕ್ಷೇತ್ರದ ಅಭ್ಯರ್ಥಿಗಳಿಗೆ ಹಾಗೂ ಕ್ಷೇತ್ರದ ಎಲ್ಲಾ ಮತದಾರರಿಗೆ ಮರು ಮತದಾನದ ದಿನಾಂಕ ಮತ್ತು ಸಮಯದ ಬಗ್ಗೆ ತಿಳುವಳಿಕೆ ನೋಟೀಸು ನೀಡುವುದು ಹಾಗೂ ವ್ಯಾಪಕ ಪ್ರಚಾರವನ್ನು ಮಾಡತಕ್ಕದ್ದು.

ಪುಟ 3ಕ್ಕೆ..

ಮೇಲ್ಕಂಡ ಕ್ಷೇತ್ರಗಳಿಗೆ ತಯಾರಿಸಲಾಗಿರುವ ಎಲ್ಲಾ ಮತಪತ್ರಗಳು ಸುರಕ್ಷಿತವಾಗಿರುವುದರಿಂದ, ಸದರಿ ಮತಪತ್ರವನ್ನು ಮರು ಮತದಾನಕ್ಕೆ ಉಪಯೋಗಿಸುವುದು. ಮತದಾನದ ದಿನದಂದು, ಮತದಾರರ **ಎಡಗೈ ಹೆಬ್ಬೆರಳಿಗೆ** ಅಳಿಸಲಾಗದ ಶಾಯಿ ಗುರುತನ್ನು ಮಾಡತಕ್ಕದ್ದು.

ಮೇಲ್ಕಂಡ ಗ್ರಾಮ ಪಂಚಾಯಿತಿ ಕ್ಷೇತ್ರಗಳ ಚುನಾವಣಾ ಅಧಿಸೂಚನೆಯನ್ನು ದಿನಾಂಕ: 07.12.2020 ರಂದು ಹೊರಡಿಸಿದ್ದು, ಆ ದಿನದಿಂದ ನಡೆದಿರುವ ಚುನಾವಣಾ ಸಂಬಂಧದ ಎಲ್ಲಾ ಪ್ರಕ್ರಿಯೆಯು ದಿನಾಂಕ: 29.12.2020 ರಂದು ನಡೆಸಲಾಗುವ ಮರು ಮತದಾನಕ್ಕೆ ಪೂರಕವಾಗಿರುತ್ತದೆ.

ಆದೇಶಾನುಸಾರ,

24/12/2020

ಅಧೀನ ಕಾರ್ಯದರ್ಶಿ
ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.

**ಇವರಿಗೆ:**

(1) ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
(2) ಸಂಬಂಧಪಟ್ಟ ಚುನಾಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

**ಪ್ರತಿಯನ್ನು ಮಾಹಿತಿಗಾಗಿ:**

ಚುನಾವಣಾ ವೀಕ್ಷಕರು, ಗ್ರಾಮ ಪಂಚಾಯಿತಿ ಚುನಾವಣೆ, ದಾವಣಗೆರೆ ಜಿಲ್ಲೆ.